# ಕರ್ನಾಟಕ ವಿಧಾನಪರಿಷತ್ತು

| | |
|---|---|
| 1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 257 (297) |
| 2. ಸದಸ್ಯರ ಹೆಸರು: | ಶ್ರೀ ಡಾ. ಧನಂಜಯ ಸರ್ಜಿ (ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು) |
| 3. ಉತ್ತರಿಸಬೇಕಾದ ದಿನಾಂಕ: | 18.08.2026 |
| 4. ಉತ್ತರಿಸಬೇಕಾದವರು: | ಮಾನ್ಯ ಮುಖ್ಯಮಂತ್ರಿಗಳು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಕೃಷಿ ಅಧಿಕಾರಿ (AO) ಹಾಗೂ ಸಹಾಯಕ ಕೃಷಿ ಅಧಿಕಾರಿ (AAO) ನೇಮಕಾತಿಗೆ ಸಂಬಂಧಿಸಿದಂತೆ ಕೃಷಿವಿದ್ಯಾರ್ಥಿಗಳು ನಡೆಸುತ್ತಿರುವ ಪ್ರತಿಭಟನೆ ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ |
| ಆ | ಕೃಷಿ ಇಲಾಖೆಯ ತಾಂತ್ರಿಕ ಹುದ್ದೆಗಳಿಗೆ ICAR ಮಾನ್ಯತೆ ಪಡೆದ ಪದವೀಧರರಿಗೆ ಮಾತ್ರ ಕಡ್ಡಾಯವಾಗಿ ಅವಕಾಶ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; | ಪ್ರಸ್ತುತ ಕೃಷಿ ಅಧಿಕಾರಿ ಮತ್ತು ಸಹಾಯಕ ಕೃಷಿ ಅಧಿಕಾರಿ ವೃಂದದ ಹುದ್ದೆಗಳಿಗೆ ನಿಗದಿಪಡಿಸಿರುವ ವೃಂದ ಮತ್ತು ನೇಮಕಾತಿ ನಿಯಮಗಳ ಬಗ್ಗೆ ಹಲವು ಕೃಷಿ ಪದವೀಧರ ವಿದ್ಯಾರ್ಥಿಗಳಿಂದ ಮನವಿ/ ಆಕ್ಷೇಪಣೆಗಳು ಸರ್ಕಾರದಲ್ಲಿ ಸ್ವೀಕೃತವಾಗಿರುವ ಹಿನ್ನೆಲೆಯಲ್ಲಿ, ಸರ್ಕಾರದ ಆದೇಶ ಸಂಖ್ಯೆ: AGRI 433 AGS 2026, ದಿನಾಂಕ:07.08.2026 ರಲ್ಲಿ ಕೃಷಿ ಇಲಾಖೆಯ (ವೃಂದ ಮತ್ತು ನೇಮಕಾತಿ) ನಿಯಮಾವಳಿ, 2021ನ್ನು ಪರಿಷ್ಕರಿಸಲು ಈ ಕೆಳಕಂಡಂತೆ ಸಲಹಾ ಸಮಿತಿ ರಚಿಸಿ, ಸರ್ಕಾರಕ್ಕೆ ವರದಿ ನೀಡುವಂತೆ ಆದೇಶಿಸಲಾಗಿರುತ್ತದೆ.<br><br>1. ಕೃಷಿಆಯುಕ್ತರು — ಸಮಿತಿಅಧ್ಯಕ್ಷರು<br>2. ಕುಲಪತಿಗಳು, ಕೃಷಿವಿಶ್ವವಿದ್ಯಾಲಯ, ಬೆಂಗಳೂರು — ಸದಸ್ಯರು<br>3. ಕುಲಪತಿಗಳು, ಕೃಷಿವಿಶ್ವವಿದ್ಯಾಲಯ, ಧಾರವಾಡ — ಸದಸ್ಯರು<br>4. ಕೃಷಿನಿರ್ದೇಶಕರು — ಸಮಿತಿಯಸದಸ್ಯ ಕಾರ್ಯದರ್ಶಿಗಳು<br><br>ಸಮಿತಿಯ ವರದಿಯನ್ನಾಧರಿಸಿ ಕೃಷಿ ಇಲಾಖೆಯ ವೃಂದ ಮತ್ತು ನೇಮಕಾತಿ (C&R) ನಿಯಮಗಳು, |

| | | |
|---|---|---|
| | | 2021ನ್ನು ಪರಿಶೀಲಿಸಿ ಸಕ್ಷಮ ಪ್ರಾಧಿಕಾರದ ಅನುಮೋದನೆಯೊಂದಿಗೆ ಪರಿಷ್ಕರಿಸಲಾಗುವುದು. |
| ಇ | ಕೃಷಿ ವಿಜ್ಞಾನದ ಮೂಲ ಅರಿವಿಲ್ಲದ ಕಡಿಮೆ ವಿದ್ಯಾರ್ಹತೆ ಹೊಂದಿರುವವರನ್ನು 'ದೇಸಿ ಪ್ರೋಗ್ರಾಂ' (DAESI) ಮೂಲಕ ರಸಗೊಬ್ಬರ ಮತ್ತು ಕೀಟನಾಶಕ ಮಾರಾಟ ಮಾಡಲು ನೇಮಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ರಸಗೊಬ್ಬರ (ನಿರವಯವ, ಸಾವಯವ ಅಥವಾ ಮಿಶ್ರಣ) (ನಿಯಂತ್ರಣ) ಆದೇಶ, 1985 ಹಾಗೂ ಕೀಟನಾಶಕ ಕಾಯ್ದೆ, 1968 ಮತ್ತು ನಿಯಮಗಳ ತಿದ್ದುಪಡಿಯು ಕೇಂದ್ರ ಸರ್ಕಾರದ ವ್ಯಾಪ್ತಿಗೆ ಒಳಪಡುತ್ತದೆ.<br><br>ದಿನಾಂಕ: 10.10.2015 ಕ್ಕೆ ಮೊದಲು ರಸಗೊಬ್ಬರ ಪರವಾನಗಿ ಪಡೆಯಲು ಹಾಗೂ ದಿನಾಂಕ: 05.11.2015 ಕ್ಕೆ ಮೊದಲು ಕೀಟನಾಶಕ ಮಾರಾಟ ಪರವಾನಗಿ ಪಡೆಯಲು ಯಾವುದೇ ವಿದ್ಯಾರ್ಹತೆಯನ್ನು ರಸಗೊಬ್ಬರ (ನಿರವಯವ, ಸಾವಯವ ಅಥವಾ ಮಿಶ್ರಣ) (ನಿಯಂತ್ರಣ) ಆದೇಶ, 1985 ಮತ್ತು ಕೀಟನಾಶಕ ನಿಯಮ, 1971 ರಡಿ ಕಡ್ಡಾಯವಿರುವುದಿಲ್ಲ.<br><br>ರಸಗೊಬ್ಬರ ಮತ್ತು ಕೀಟನಾಶಕಗಳನ್ನು ಶಿಫಾರಸ್ಸು ಮಾಡಿದ ಬೆಳೆಗಳಿಗೆ ಮತ್ತು ಅವಶ್ಯವಿರುವ ಪ್ರಮಾಣದಲ್ಲಿ ರೈತರಿಗೆ ಮಾರಾಟ ಮಾಡುವ ಉದ್ದೇಶದಿಂದ ಮತ್ತು ಅವೈಜ್ಞಾನಿಕ ಮಾರಾಟವನ್ನು ತಡೆಯಲು ರಸಗೊಬ್ಬರ (ನಿರವಯವ, ಸಾವಯವ ಅಥವಾ ಮಿಶ್ರಣ) (ನಿಯಂತ್ರಣ) ಆದೇಶ, 1985ಕ್ಕೆ ತಿದ್ದುಪಡಿಗೊಳಿಸಿ, ರಸಗೊಬ್ಬರ ಮಾರಾಟ ಪರವಾನಗಿ ಪಡೆಯಲು ಅಧಿಸೂಚನೆ ಸಂಖ್ಯೆ: SO 2776 (E) ದಿನಾಂಕ:10.10.2015ರನ್ವಯ Bachelor of Science in Agriculture from a recognised University or Institute; or Bachelor of Science in Chemistry from a recognised University or Institute; or Diploma in Agriculture Science from a recognised University or Institute ; or Certificate Course on agri-inputs for a minimum period of six months from National Institute of Agricultural Extension Management (MANAGE), National Institute of Plant Health Management (NIPHM) and other Government approved institute: ವಿದ್ಯಾರ್ಹತೆ ಹೊಂದಿರುವುದನ್ನು ಕಡ್ಡಾಯಗೊಳಿಸಲಾಗಿರುತ್ತದೆ.<br><br>ಮುಂದುವರೆದು, ಕೀಟನಾಶಕ ಮಾರಾಟ ಪರವಾನಗಿಯನ್ನು ಪಡೆಯಲು ಕೀಟನಾಶಕ ನಿಯಮ, 1971 ಕ್ಕೆ ತಿದ್ದುಪಡಿಗೊಳಿಸಿ, ಅಧಿಸೂಚನೆ ಸಂಖ್ಯೆ: GSR 840(E) ದಿನಾಂಕ: 05.11.2015 ರನ್ವಯ "Graduate degree in Agricultural Sciences or Biochemistry or Biotechnology or Life Sciences or in Science with Chemistry or Botany or Zoology as the minimum qualification" ಮತ್ತು ಅಧಿಸೂಚನೆ ಸಂಖ್ಯೆ: GSR 106(E) ದಿನಾಂಕ: 01.02.2017 ರನ್ವಯ "One year diploma course in Agriculture or Horticulture or related |

| | | |
|---|---|---|
| | | subjects from any government recognized university or institute with course content on plant protection and pesticides management" ವಿದ್ಯಾರ್ಹತೆಯನ್ನು ಹೊಂದಿರುವುದನ್ನು ಕಡ್ಡಾಯಗೊಳಿಸಲಾಗಿರುತ್ತದೆ. |
| ಈ | ಹೀಗೆ ಕಡಿಮೆ ವಿದ್ಯಾರ್ಹತೆ ಉಳ್ಳವರನ್ನು 'ದೇಸಿ ಪ್ರೋಗ್ರಾಂ' ಮೂಲಕ ರಸಗೊಬ್ಬರ ಮತ್ತು ಕೀಟನಾಶಕ ಮಾರಾಟ ಮಾಡಲು ನೇಮಿಸುವುದರಿಂದ ರೈತರಿಗೆ ಆಗುವ ಸಮಸ್ಯೆ (ಬೆಳೆ ನಷ್ಟ) ಕುರಿತು ಸರ್ಕಾರದ ನಿಲುವೇನು: ಪ್ರಸ್ತುತ ಉದ್ಭವಿಸಿರುವ ಸಮಸ್ಯೆ ಪರಿಹರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | 2015ನೇ ಸಾಲಿಗೂ ಮೊದಲು ರಸಗೊಬ್ಬರ ಮತ್ತು ಕೀಟನಾಶಕ ಮಾರಾಟ ಪರವಾನಗಿ ಪಡೆಯಲು ಯಾವುದೇ ವಿದ್ಯಾರ್ಹತೆ ಕಡ್ಡಾಯವಾಗಿರುವುದಿಲ್ಲ. ಅವೈಜ್ಞಾನಿಕ ಪರಿಕರಗಳ ಮಾರಾಟವನ್ನು ತಡೆಯಲು ಹಾಗೂ ರೈತರಿಗೆ ಆಗುವ ಸಮಸ್ಯೆಗಳನ್ನು ಕಡಿಮೆಗೊಳಿಸುವ ಉದ್ದೇಶದಿಂದ ರಸಗೊಬ್ಬರ ಮತ್ತು ಕೀಟನಾಶಕಗಳ ಮಾರಾಟ ಪರವಾನಗಿಯನ್ನು ಪಡೆಯಲು ವಿಜ್ಞಾನದ ವಿಷಯಗಳಲ್ಲಿ ಪದವಿ ವಿದ್ಯಾರ್ಹತೆ ಹೊಂದಿರುವುದು ಅಥವಾ ಕೃಷಿಯಲ್ಲಿ ಕನಿಷ್ಠ ಒಂದು ವರ್ಷ ಡಿಪ್ಲೋಮಾ ವಿದ್ಯಾರ್ಹತೆಯನ್ನು ಹೊಂದಿರುವುದು ಕಡ್ಡಾಯಗೊಳಿಸಲಾಗಿರುತ್ತದೆ.<br><br>DAESI ಕೋರ್ಸ್ ಪಠ್ಯಕ್ರಮದಲ್ಲಿ ಕೃಷಿ-ಪರಿಸರ ಪರಿಸ್ಥಿತಿಗಳು, ಮಣ್ಣಿನ ಆರೋಗ್ಯ ನಿರ್ವಹಣೆ, ಮಳೆ ಆಧಾರಿತ ಕೃಷಿ, ಬೀಜ ಮತ್ತು ಬೀಜ ಉತ್ಪಾದನೆ, ನೀರಾವರಿ ತಂತ್ರಗಳು ಮತ್ತು ಅವುಗಳ ನಿರ್ವಹಣೆ, ಕಳೆನಿರ್ವಹಣೆ, ಕೃಷಿ ಉಪಕರಣಗಳು ಮತ್ತು ಯಂತ್ರೋಪಕರಣಗಳು, ಕೃಷಿಯಲ್ಲಿ ಕೀಟ ಮತ್ತು ರೋಗಗಳ ನಿಯಂತ್ರಣ, ಪ್ರಮುಖ ಸ್ಥಳೀಯ ಬೆಳೆಗಳ ಉತ್ಪಾದನಾ ತಂತ್ರಜ್ಞಾನ, ಕೃಷಿ ಪರಿಕರಗಳಿಗೆ ಸಂಬಂಧಿಸಿದ ಕಾಯಿದೆಗಳು, ನಿಯಮಗಳು ಮತ್ತು ನಿಬಂಧನೆಗಳು, ಕೃಷಿವಲಯಕ್ಕೆ ಸಂಬಂಧಿಸಿದ ಯೋಜನೆಗಳು, ವಿಸ್ತರಣಾ ವಿಧಾನಗಳು ಮತ್ತು ಕ್ರಮಗಳು ಮತ್ತು ಅಗತ್ಯಕ್ಕೆ ಅನುಗುಣವಾಗಿ ಇತರೆ ಐಚ್ಛಿಕ ವಿಷಯಗಳ ಬೋಧನೆ ಒಳಗೊಂಡಿರುವುದರಿಂದ ರಸಗೊಬ್ಬರ ಮತ್ತು ಕೀಟನಾಶಕಗಳನ್ನು ನಿಯಮಾನುಸಾರ ಮಾರಾಟ ಮಾಡಲು DAESI ವಿದ್ಯಾರ್ಹತೆ ಪಡೆದವರು ಪರಿಣಿತಿಯನ್ನು ಹೊಂದಿರುತ್ತಾರೆ.<br><br>ರಸಗೊಬ್ಬರ (ನಿರವಯವ, ಸಾವಯವ ಅಥವಾ ಮಿಶ್ರಣ) (ನಿಯಂತ್ರಣ) ಆದೇಶ, 1985 ಹಾಗೂ ಕೀಟನಾಶಕ ಕಾಯ್ದೆ 1968 ಮತ್ತು ನಿಯಮಗಳಡಿ ರಸಗೊಬ್ಬರ ಮತ್ತು ಕೀಟನಾಶಕ ಪರವಾನಿಗೆ ಪಡೆಯಲು ವಿದ್ಯಾರ್ಹತೆ ನಿಗದಿಪಡಿಸುವ ಶಾಸನಬದ್ಧ ಅಧಿಕಾರವು ಕೇಂದ್ರ ಸರ್ಕಾರಕ್ಕೆ ಮಾತ್ರ ಇರುತ್ತದೆ. |

(ನರೇಂದ್ರ ಸ್ವಾಮಿ)
ಕೃಷಿ ಸಚಿವರು

ಸಂಖ್ಯೆ: AGRI 288 AGS 2026